ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಪ್ರವಾಸಿ ತಾಣಗಳಲ್ಲಿ ಕೆಲವು ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆ.

ಆ) ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಮೊತ್ತ
1	ಉಚ್ಚಂಗಿದುರ್ಗದಲ್ಲಿ ಯಾತ್ರಿನಿವಾಸ ನಿರ್ಮಾಣ (2008-09)	49 63	49 63
2	ಜಗಳೂರು ತಾಲ್ಲೂಕಿನ ಕಣ್ಣುಪ್ಪ ಗ್ರಾಮದ ಶ್ರೀ ಗವಿಮರದ ಬಳಿ ಯಾತ್ರಿನಿವಾಸ ನಿರ್ಮಾಣ (2010-11)	129 65	129 65
3	ಜಗಳೂರು ತಾ ಸಿದ್ದಹಳ್ಳಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಡಾರ್ಮಿಟರಿ ನಿರ್ಮಾಣ (2013-14)	10.00	10 00
4	ಜಗಳೂರು ತಾಲ್ಲೂಕು ಕಲ್ಲೇದೇವರಪುರ ಕಲ್ಲೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ಹಾಗೂ ಸಾಮೂಹಿಕ ಶೌಚಾಲಯ ನಿರ್ಮಾಣ ಹಾಗೂ ಸ್ನಾನಗೃಹ (2014-15)	50 00	–
	ಒಟ್ಟು	239 28	189 28

ಶಾಲಾ ಮಕ್ಕಳಿಗೆ ಉಚಿತ ಹಾಲು ಸರಬರಾಜು

3198 (2282); ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗಪಟ್ಟಣ)

ಅ) ರಾಜ್ಯದ ಶಾಲೆಗಳಲ್ಲಿ ವಾರದ ಯಾವ ದಿನಗಳಲ್ಲಿ ಮಕ್ಕಳಿಗೆ ಉಚಿತವಾಗಿ ಹಾಲು ನೀಡಲಾಗುತ್ತಿದೆ;

ಆ) ಹಾಗಿದ್ದಲ್ಲಿ, ಶಾಲೆಗಳಿಗೆ ಸರಬರಾಜು ಮಾಡುತ್ತಿರುವ ಹಾಲಿನ ಪುಡಿಯನ್ನು ಸುರಕ್ಷಿತವಾಗಿಡಲು ಶೀತಲ ಕೇಂದ್ರದ ವ್ಯವಸ್ಥೆ ಇದೆಯೇ; ಹಾಗಿದ್ದಲ್ಲಿ ಹಾಲಿನ ಪುಡಿ ಶೇಖರಣೆಗೆ ಯಾವ ವ್ಯವಸ್ಥೆ ಕಲ್ಪಿಸಲಾಗಿದೆ; (ವಿವರ ನೀಡುವುದು)

ಇ) ಮಕ್ಕಳಿಗೆ ನೀಡುತ್ತಿರುವ ಪೌಡರ್ ಹಾಲಿನ ಗುಣಮಟ್ಟ ಪರೀಕ್ಷೆ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ ಎಷ್ಟು ತಿಂಗಳಿಗೊಮ್ಮೆ ಗುಣಮಟ್ಟ ಪರೀಕ್ಷೆ ಮಾಡಲಾಗುವುದು;

ಈ) ಗುಣಮಟ್ಟ ಪರೀಕ್ಷೆ ಮಾಡುವ ಪ್ರಾಧಿಕಾರ ಯಾವುದು; (ವಿವರ ನೀಡುವುದು)

ಉ) ಸ್ಥಳೀಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕವೇ ಮಕ್ಕಳಿಗೆ ಶುದ್ಧ, ನೈಜ ಹಾಲನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ಒದಗಿಸುವುದು)

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ರಾಜ್ಯದ 1 ರಿಂದ 10ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ವಾರದಲ್ಲಿ 03 ದಿನ (ದಿನ ಬಿಟ್ಟು ದಿನ) ಹಾಲು ನೀಡಲಾಗುತ್ತಿದೆ.

ಆ) ಹಾಲಿನ ಪುಡಿ ಸುರಕ್ಷತೆಗೆ ಶೀತಲ ಕೇಂದ್ರ ಅವಶ್ಯಕತೆ ಇರುವುದಿಲ್ಲ. ಕೆ.ಎಂ.ಎಫ್. (ಕರ್ನಾಟಕ ಹಾಲು ಮಹಾಮಂಡಳಿ) ನವರಿಂದ ಹಾಲಿನ ಪುಡಿಯನ್ನು ಇಲಿಗಳು ಮತ್ತು ಕೀಟಗಳು ಇಲ್ಲದೇ ಇರುವ ಒಣ ಸ್ಥಳ ಹೊಂದಿರುವ ಗೋದಾಮಿನಲ್ಲಿ ಸಂರಕ್ಷಿಸಲಾಗುತ್ತಿದೆ.

ಇ) ಮಕ್ಕಳಿಗೆ ನೀಡುತ್ತಿರುವ ಹಾಲಿನ ಪುಡಿ ಗುಣಮಟ್ಟ ಪರೀಕ್ಷೆ ಮಾಡಲಾಗುತ್ತಿದೆ. ಕರ್ನಾಟಕ ಹಾಲು ಮಹಾ ಮಂಡಳಿಯ ಘಟಕಗಳಲ್ಲಿ ಪ್ರತಿ ನಿತ್ಯ ಯೋಜನೆಗೆ ಬೇಕಾಗುವ ಹಾಲಿನ ಪುಡಿಯನ್ನು ಸುಸಜ್ಜಿತ ಲ್ಯಾಬೋರೆಟರಿಗಳಲ್ಲಿ ಗುಣಮಟ್ಟದ ಪರೀಕ್ಷೆಗೆ ಒಳಪಡಿಸಿ ಸರಬರಾಜು ಮಾಡಲಾಗುತ್ತಿದೆ.

ಈ) ಹಾಲಿನ ಪುಡಿ ಉತ್ಪಾದಿಸುವ ಕರ್ನಾಟಕ ಹಾಲು ಮಹಾ ಮಂಡಳಿಯ ಘಟಕಗಳು ಎಫ್.ಎಸ್.ಎಸ್.ಐ. ಸರ್ಟಿಫೈಡ್ ಘಟಕಗಳಾಗಿದ್ದರಿಂದ, ಸುಸಜ್ಜಿತ ಲ್ಯಾಬೋರೆಟರಿಗಳನ್ನು ಹೊಂದಿದ್ದು, ಸದರಿ ಘಟಕಗಳಲ್ಲಿಯೇ ಆಹಾರ ಕಾಯ್ದೆ ನಿಯಮಗಳನ್ವಯ ಗುಣಮಟ್ಟ ಪರೀಕ್ಷೆ ಕೈಗೊಳ್ಳಲಾಗುತ್ತಿದೆ.

ಉ) ಪ್ರಸ್ತುತ ಇಲ್ಲ.